ಗಂಡು ಮಕ್ಕಳು ಈ ರೀತಿಯ ಜವಾಬ್ದಾರಿ ತೆಗೆದುಕೊಳ್ಳುವುದು ಅಪರೂಪ. ತಾನಿನ್ನು ಜೀವನಪೂರ್ತಿ ಏಕಾಂಗಿ ಅನ್ನಿಸಿದಾಗ ಅವಳಿಗೆ ದುಃಖ ಉಕ್ಕಿ ಬಂತು.

ಅವಳು ಕೆನರಾ ಬ್ಯಾಂಕ್ ಬಳಿ ಇಳಿದು, ಒಳಗೆ ಪ್ರವೇಶಿಸಿ, ನೇರವಾಗಿ ಮ್ಯಾನೇಜರ್ ಚೇಂಬರ್ ಹೊಕ್ಕಳು. ಯಾವುದೋ ಲೆಟರ್ ಇಟ್ಟುಕೊಂಡು ಕುಳಿತಿದ್ದ ರಾಮ್‌ಗೋಪಾಲ್ ಅವಳನ್ನು ನೋಡಿ ಆಶ್ಚರ್ಯದಿಂದ ಕಣ್ಣರಳಿಸಿದ. ನಂತರ ತಕ್ಷಣ 'ವಾಟ್ ಎ ಪ್ಲೆಸೆಂಟ್ ಸರ್‌ಪ್ರೈಸ್. ಬನ್ನಿ ಕುಳಿತುಕೊಳ್ಳಿ.'

'ಥ್ಯಾಂಕ್ಸ್. ನನಗೆ ಕುಳಿತುಕೊಳ್ಳುವಷ್ಟು ಟೈಂ ಇಲ್ಲ. ನಾನು ನಿಮ್ಮ ಹತ್ತಿರ ಈಗಲೇ ಒಂದು ಮುಖ್ಯವಾದ ವಿಷಯ ಮಾತಾಡಬೇಕು'

'...'

'ಏನಾದರೂ'

'ಪ್ಲೀಸ್ ಪ್ರಶ್ನೆ ಮಾಡಬೇಡಿ. ನಿಮಗೆ ಬಿಡುವಿದೆಯೋ ಇಲ್ಲವೋ ಹೇಳಿ'

'ಆಗಲಿ ನೀವು ಹೊರಗಿರಿ. ಹತ್ತು ನಿಮಿಷಗಳಲ್ಲಿ ಬರ್ತೀನಿ'

ಅವಳು ಹೊರಗೆ ಬಂದು ಎದುರುಗಡೆ ಇದ್ದ ಬಸ್‌ಸ್ಟಾಪ್‌ನಲ್ಲಿ ನಿಂತಳು. ಹೇಳಿದಂತೆ ಹತ್ತು ನಿಮಿಷಗಳಲ್ಲಿ ಕಾರ್ ಕೀ ತಿರುಗಿಸುತ್ತಾ ಬಂದ ರಾಮ್‌ಗೋಪಾಲ್‌ನನ್ನು ನೋಡಿ ಅವಳ ಮನಸ್ಸು ಮೂಕವಾಗಿ ರೋದಿಸಿತು. ಈ ವ್ಯಕ್ತಿ ತನಗೇನೂ ಅಲ್ಲ. ಈ ಕ್ಷಣದಿಂದ ನಾವು ಅಪರಿಚಿತರು ಎನ್ನಿಸಿದಾಗ ಅವಳ ಕಣ್ಣುಗಳು ತುಂಬಿ ಬಂದವು. ಅವನು ಕಾರ್ ಬಾಗಿಲು ತೆಗೆದು ಹೇಳಿದ.

'ಎಲ್ಲಿಗಾದರೂ ಊಟಕ್ಕೆ ಹೋಗೋಣ'

'ನೀವು ಯಾವುದಾದರೂ ಜನಸಂದಣಿಯಿಲ್ಲದ ಹೋಟೆಲ್‌ಗೆ ಕರೆದುಕೊಂಡು ಹೋಗಿ. ತುಂಬಾ ಜನರಿದ್ದರೆ ಮಾತನಾಡುವುದಕ್ಕೆ ಆಗಲ್ಲ'

ಅವನು ಕಾರು ಡ್ರೈವ್ ಮಾಡುವಾಗಲೂ ಅವಳನ್ನು ಮಾತಿಗೆಳೆಯಲು ಪ್ರಯತ್ನಿಸಿದ. ಅವಳು ಬಿಗಿಯಾಗೇ ಇದ್ದಳು. ತುಮಕೂರು ರಸ್ತೆಯಲ್ಲಿ ಹೋಗಿ ಬಲಕ್ಕೆ ತಿರುಗಿಸಿದ ಕೂಡಲೇ ಕಾಣುತ್ತಿತ್ತು ಆ ರೆಸ್ಟೋರೆಂಟ್.

'ಇದರ ಹೆಸರು ಪರಿಶ್ರಮ ರೆಸ್ಟೋರೆಂಟ್. ಊಟ ಸಿಂಪಲ್ ಆಗಿ ಚೆನ್ನಾಗಿರತ್ತೆ. ಬಾಳೆ ಎಲೆಯ ಊಟ'

ಅವಳು ಏನೂ ಮಾತಾಡಲಿಲ್ಲ. ಜನ ಹೆಚ್ಚಾಗಿ ಇರಲಿಲ್ಲ. ರಾಮಗೋಪಾಲನನ್ನು ನೋಡಿ ಒಂದು ಚಿಕ್ಕ ರೂಮ್‌ನಲ್ಲಿ ಎಲೆ ಹಾಕಿದರು ಭಟ್ಟರು. ಅನ್ನ, ಹುಳಿ, ಸಾರು, ಪಲ್ಯ, ಮೊಸರುಬಜ್ಜಿ, ಉಪ್ಪಿನಕಾಯಿ, ಮೊಸರು, ಹಪ್ಪಳ, ಸಂಡಿಗೆ. ಊಟ ರುಚಿಯಾಗಿತ್ತು. ಅವನು ಆ ಭಟ್ಟರ ಬಗ್ಗೆ ಹೇಳುವುದನ್ನು ಕೇಳುತ್ತಾ ಊಟ ಮಾಡಿದಳು ಬೃಂದಾ.

'ಏನೋ ಮಾತಾಡಬೇಕೂಂತ ಹೇಳಿದ್ರಿ?'

'ನೀವು ನನ್ನನ್ನು ಮದುವೆಯಾಗಲು ಒಪ್ಪಲು ಕಾರಣವೇನು?'

'ಎರಡು ನಿಮಿಷ ಟೈಂ ಕೊಡಿ'

ಅವಳು ಮೌನದ ಸ್ನೇಹ ಮಾಡಿಕೊಂಡಳು.

'ಮೊದಲನೆಯದಾಗಿ ನೀವು ಸರಳವಾಗಿ ನೋಡಕ್ಕೆ ಚೆನ್ನಾಗಿದ್ದೀರಿ. ನಾನೇನು ಮನ್ಮಥ ಅಲ್ಲ. ಆದರೂ ಲಕ್ಷಣವಾಗಿರುವ ಹುಡುಗಿ ಬಯಸಿದ್ದೆ'

'ಓ.ಕೆ.'

'ನೀವು ನಿಮ್ಮ ತಮ್ಮ ತಂಗಿಯರ ಜವಾಬ್ದಾರಿ ತೆಗೆದುಕೊಂಡಿರುವುದನ್ನು ಗಮನಿಸಿದಾಗ ನೀವು ನನ್ನ ಕಷ್ಟ–ಸುಖ ಹಂಚಿಕೊಳ್ಳುತ್ತೀರ ಅನ್ನುವ ಭರವಸೆ ಬಂತು'

'ವೆರಿ ಫೈನ್'

'ಮೂರನೆಯದಾಗಿ ನಿಮ್ಮ ನೇರನುಡಿಗಳು ನನಗಿಷ್ಟವಾದವು. ನಾನು, ಅಮ್ಮ ನಿಮ್ಮ ಮನೆಗೆ ಬಂದಾಗ ನೀವು ಹೇಳಿದ ಮಾತುಗಳು ನೆನಪಿದೆಯಾ?'

'ಇಲ್ಲ ಮರೆತಿದ್ದೇನೆ'

'ಅಮ್ಮ ನನಗೆ ನಿಮ್ಮ ಮಗ ಒಪ್ಪಿಗೆ. ಆದರೆ ನಾನು ಅವರ ಜೊತೆ ಮಾತ್ರ ಅಲ್ಲ ನಿಮ್ಮ ಜೊತೆಯೂ ಹೊಂದಿಕೊಳ್ಳಬೇಕು. ನಾನು ಹೊರಗೆ ಹೋಗಿ ಕೆಲಸ ಮಾಡುವುದರಿಂದ ನನ್ನ ಕೈಲಾದಷ್ಟು ಕೆಲಸ ಮಾಡ್ತೀನಿ. ನೀವು ಸಣ್ಣ ವಿಷಯಗಳನ್ನು ದೊಡ್ಡದು ಮಾಡಬಾರದು. ನಾನೂ ಆದಷ್ಟು ಹೊಂದಿಕೊಂಡು ಹೋಗ್ತೀನಿ.'

'ಸರಿಯಮ್ಮ, ನಾನು ಕಾಟ ಕೊಡುವ ಅತ್ತೆ ಅಲ್ಲ'

'ನಾನೂ ನಿಮ್ಮಿಂದ ಮಗನನ್ನು ಕಿತ್ತುಕೊಳ್ಳುವಂತಹ ಸೊಸೆಯಲ್ಲ. ಮುಖ್ಯವಾಗಿ ನಾವು ಹೊಂದಿಕೊಂಡಿರಬೇಕು'

'ನಿಮ್ಮ ಈ ಮಾತುಗಳು ನನಗೆ ತುಂಬಾ ಇಷ್ಟವಾದವು. ನೀವು ತುಂಬಾ ನೇರವಾಗಿ ಮಾತಾಡ್ತೀರ'

'ನಾನು ನಿಮಗೊಂದು ವಿಷಯ ತಿಳಿಸಲು ಬಂದಿದ್ದೇನೆ'

'ಹೇಳಿ'

'ನನಗೆ white patches ಕಾಣಿಸಿಕೊಂಡಿದೆ'

'ಹಾಗಂದ್ರೆ?'

'ತೊನ್ನು ಅಂತ ಅಂತಾರಲ್ಲ... ಅದು. ನಾನಿವತ್ತು ಗಮನಿಸಿದೆ, ಕುತ್ತಿಗೆಯ ಹತ್ತಿರ ಕಾಣಿಸಿಕೊಂಡಿದೆ'

'ಅದು ಸಾಂಕ್ರಾಮಿಕ ರೋಗವೂ ಅಲ್ಲ. ಆನುವಂಶಿಕವಾಗಿ ಬರುವ ರೋಗವೂ ಅಲ್ಲ'

'ಅದು ಬಹಳ ಬೇಗ ಹರಡುತ್ತದೆ. ಅದು ಸಾಂಕ್ರಾಮಿಕವೋ ವಂಶಪಾರಂಪರ್ಯವಾಗಿ ಬರುತ್ತದೋ ನನಗೆ ಗೊತ್ತಿಲ್ಲ. ಆದರೆ ಅದು ಬೇಗ ಹರಡುತ್ತದೆ. ಆದ್ದರಿಂದ ಈ ಮದುವೆ ಬೇಡ'

'ಮದುವೆಯಾದ ಮೇಲೆ ಕಾಣಿಸಿಕೊಂಡಿದ್ರೆ ಏನ್ಮಾಡ್ತಿದ್ರಿ?'

'ಆಗ ನಿಮ್ಮ ನಿರ್ಧಾರಕ್ಕೆ ವಿಷಯವನ್ನು ಒಪ್ಪಿಸ್ತಿದ್ದೆ. ನಿಮಗೆ ಮೋಸ ಮಾಡಿ ಮದುವೆಯಾಗುವ ಉದ್ದೇಶ ನನಗಿಲ್ಲ. ಆದ್ದರಿಂದ ಈಗಲೇ ಹೇಳ್ತಿದ್ದೇನೆ. ನೀವು ದುಡುಕಿ ನಿರ್ಧಾರ ತೆಗೆದುಕೊಳ್ಳಬೇಡಿ'

'ನನಗೆ ಒಂದು ದಿನ ಟೈಂ ಕೊಡಿ. ನಾಳೆ ಬೆಳಿಗ್ಗೆ 10 ಗಂಟೆ ಒಳಗೆ ನನ್ನ ನಿರ್ಧಾರ ಹೇಳ್ತೀನಿ'

'ಥ್ಯಾಂಕ್ಸ್'

'ಈ ವಿಚಾರ ಈಗಲೇ ಯಾರಿಗೂ ಹೇಳಬೇಡಿ'

'ಆಗಲಿ ಹೇಳಲ್ಲ'

ಅವಳನ್ನು ರಾಮ್‌ಗೋಪಾಲ್ ಹತ್ತಿರದ ಬಸ್‌ಸ್ಟಾಪ್‌ಗೆ ಬಿಟ್ಟ. ಅವಳು ಮನೆ ತಲುಪಿದಾಗ ಮೂರು ಗಂಟೆ.

'ಊಟ ಮಾಡೋಣ ಬಾ'

'ನಂದು ಊಟ ಆಯ್ತುಮ್ಮ. ಕಾಲೇಜಲ್ಲಿ ಪಾರ್ಟಿ ಇತ್ತು. ಅದಕ್ಕೆ ಫೋನ್ ಮಾಡಿದ್ರು'

'ನಾಳೆ ಸೀರೆ ತರಲು ಹೋಗೋಣವಾ?'

'ನಾಳೆಯಾಗಲಿ. ಈಗ ನಾನು ಮಲಗ್ತೀನಿ' ಎಂದಳು ಬೃಂದಾ.

ಅವಳು ಬಟ್ಟೆ ಬದಲಾಯಿಸಿ ಮಂಚದ ಮೇಲೆ ಉರುಳಿ ಫ್ಯಾನ್‌ಗೆ ಮುಖ ಒಡ್ಡಿದಳು. ರಾಮ್‌ಗೋಪಾಲ್ ಬಳಿ ವಿಷಯ ತಿಳಿಸಿದ್ದರಿಂದ ಅವಳ ಮನಸ್ಸು ಹಗುರವಾಗಿತ್ತು. ಅವನ ನಡವಳಿಕೆ, ಗಾಂಭೀರ್ಯ, ಮುಗುಳ್ನಗೆ ಚೆಲ್ಲುವ ಮುಖ ನೆನಪಾದಾಗ ನಾನೇ ನನ್ನ ಬಾಳಿಗೆ ಬೆಂಕಿ ಇಟ್ಟುಕೊಂಡೆನಾ? ರಾಮ್‌ಗೋಪಾಲ್ ಅಂತಹ ಸಹೃದಯ ವ್ಯಕ್ತಿಯನ್ನು ನನ್ನ ಮೂರ್ಖತನದಿಂದ ಕಳೆದುಕೊಳ್ಳುತ್ತಿದ್ದೇನಾ? ಎಂಬ ಪ್ರಶ್ನೆಗಳು ಕಾಡಿದವು. ಅವಳಿಗೆ ಮನೆಯಲ್ಲಿರಲಾಗಲಿಲ್ಲ. ಸಾಯಂಕಾಲ ಮುಖ ತೊಳೆದು, ಹತ್ತಿರದ ಸಾಯಿಬಾಬಾನ ದೇವಸ್ಥಾನಕ್ಕೆ ಹೋಗಿ ಕುಳಿತಳು. ಅದು ಅವಳ ಮೆಚ್ಚಿನ ತಾಣ. ಸಾಯಿಬಾಬಾ ಬಗ್ಗೆ ಅಪಾರ ಭಕ್ತಿ, ನಂಬಿಕೆ. ಅಲ್ಲಿ ಕುಳಿತು ಧ್ಯಾನ ಮಾಡಿದಳು. ಏಳು ಗಂಟೆಯ ಹೊತ್ತಿಗೆ ತರಕಾರಿ ತೆಗೆದುಕೊಂಡು ಮನೆಗೆ ಬಂದಳು. ಮನೆಯಲ್ಲಿ ಯಾರ್ಯಾರೋ ಇರುವಂತೆ ಭಾಸವಾಯಿತು.

ರಾಮಗೋಪಾಲ್ ತಾಯಿ, ಅಕ್ಕ ಬಂದಿದ್ದರು. ಅವಳು ತರಕಾರಿ ಚೀಲ ಒಳಗೆ ಇಟ್ಟು ಬಂದಳು.

'ತರಕಾರಿ ತರಕ್ಕೆ ಹೋಗಿದ್ದೆಯಾ?'

'ಸಾಯಿಬಾಬಾನ ದೇವಸ್ಥಾನಕ್ಕೆ ಹೋಗಿದ್ದೆ. ಹಾಗೆ ಬರುವಾಗ ತರಕಾರಿ ತಂದೆ. ಕಾಫಿ ಕೊಡಲಾ?'

'ನಿಮ್ಮ ತಾಯಿ ಕೊಡುಬಳೆ, ಕಾಫಿ ಕೊಟ್ಟರು. ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಬಂದು ಬಿಡಮ್ಮ. ಮದುವೆ ಸೀರೆ ತೆಗೆಯಬೇಕು'

'ನಾನು ಯಾಕೆ?'

'ನೀನು ತಾನೆ ಮದುಮಗಳು? ರಾಮು ಕೂಡ ಬರ್ತಾನೆ. ಉಂಗುರ ಆರಿಸ್ತಾನಂತೆ. ಈಗ ಮನೆಗೆ ಅವನ ಹಳೆಯ ಫ್ರೆಂಡ್ಸ್ ಬಂದರು. ಅದಕ್ಕೆ ಬರಲಿಲ್ಲ'

ಅವಳ ಮುಖ ಅರಳಿತು. ಅವರನ್ನು ಆಟೊ ಹತ್ತಿಸಿ ಮನೆಗೆ ಬಂದಾಗ ರಾಮ್‌ಗೋಪಾಲ್ ಮೆಸೇಜ್ ಕಾಣಿಸಿತು.

'ನೀವು ಹೇಗಿದ್ದರೂ ನನಗೆ ಒಪ್ಪಿಗೆ. ಏನೇನೋ ಕಾರಣ ಹೇಳಿ ನಿಮ್ಮನ್ನು ಕಳೆದುಕೊಳ್ಳಲಾರೆ. ನಾನು ನಿಮ್ಮ ಜೊತೆ ಇರುವಾಗ ಭಯವೇಕೆ? ಧೈರ್ಯದಿಂದ ಬದುಕನ್ನು ಎದುರಿಸೋಣ'.

ಅವನು ಕಳುಹಿಸಿದ್ದ ಮೆಸೇಜ್‌ಗೆ ತುಟಿ ಒತ್ತಿದಳು. ದೇವರು ಕರುಣಾಮಯಿ ಅನ್ನಿಸಿ, ಹೃದಯ ತುಂಬಿ ಬಂದು, ಕಣ್ಣುಗಳು ಒದ್ದೆಯಾದವು.

ಪ್ರತಿಕ್ರಿಯಿಸಿ: feedback@sudha.co.in

